**ವಿಷಯ:** 2016–17ನೇ ಸಾಲಿನ ವಿಧಾನ ಸಭಾ ಮತ ಕ್ಷೇತ್ರವಾರು ಪ್ರಗತಿ ಪಥ ಪುಸ್ತಿಕೆ (ಪೂರ್ತಿ ವರ್ಷಕ್ಕೆ ಸಂಪುಟ 2 ಮತ್ತು 3) ಹಾಗೂ 2017–18 ನೇ ಸಾಲಿಗೆ (ಆಗಸ್ಟ್ 2017 ರವರೆಗೆ) ಪ್ರತ್ಯೇಕವಾಗಿ ಪೂರಕ ಮಾಹಿತಿ ಸಂಪುಟ 2(ಎ) ಮತ್ತು 3(ಎ) ನಲ್ಲಿ ಪುಸ್ತಿಕೆ ಮುದ್ರಿಸುವ ವೆಚ್ಚವನ್ನು ಭರಿಸುವ ಬಗ್ಗೆ.

**ಓದಲಾಗಿದೆ:** ದಿನಾಂಕ: 16–09–2017 ರಂದು ಅಧ್ಯಕ್ಷರು, ವಿಧಾನ ಸಭಾ ಮತಕ್ಷೇತ್ರವಾರು ಪ್ರಗತಿ ಪಥ ಪುಸ್ತಿಕೆ ತಯಾರಿಕೆ ಮೇಲುಸ್ತುವಾರಿ ಸಮಿತಿ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯದಂತೆ.

**ಪ್ರಸ್ತಾವನೆ:**

ಮೇಲೆ ಓದಲಾದ ನಿರ್ಣಯದಂತೆ 2016–17ನೇ ಸಾಲಿನ ವಿಧಾನ ಸಭಾ ಮತ ಕ್ಷೇತ್ರವಾರು ಪ್ರಗತಿ ಪಥ ಪುಸ್ತಿಕೆ (ಪೂರ್ತಿ ವರ್ಷಕ್ಕೆ ಸಂಪುಟ 2 ಮತ್ತು 3) ಹಾಗೂ 2017–18 ನೇ ಸಾಲಿಗೆ (ಆಗಸ್ಟ್ 2017 ರವರೆಗೆ) ಪ್ರತ್ಯೇಕವಾಗಿ ಪೂರಕ ಮಾಹಿತಿ ಸಂಪುಟ 2(ಎ) ಮತ್ತು 3(ಎ) ಗಳನ್ನು ಪುಸ್ತಿಕೆಯಲ್ಲಿ ಮುದ್ರಿಸುವ ವೆಚ್ಚವನ್ನು ಭರಿಸುವ ಬಗ್ಗೆ ಕೋರಿರುವ ಸ್ಪಷ್ಟೀಕರಣಕ್ಕಾಗಿ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 01 ಯೋಉಮಾ (ಪಿ) 2017 ಬೆಂಗಳೂರು ದಿನಾಂಕ: 18–09–2017**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ 2016–17ನೇ ಸಾಲಿನ ವಿಧಾನ ಸಭಾ ಮತ ಕ್ಷೇತ್ರವಾರು ಪ್ರಗತಿ ಪಥ ಪುಸ್ತಿಕೆ (ಪೂರ್ತಿ ವರ್ಷಕ್ಕೆ ಸಂಪುಟ 2 ಮತ್ತು 3) ಹಾಗೂ 2017–18 ನೇ ಸಾಲಿಗೆ (ಆಗಸ್ಟ್ 2017 ರವರೆಗೆ) ಪ್ರತ್ಯೇಕವಾಗಿ ಪೂರಕ ಮಾಹಿತಿ ಸಂಪುಟ 2(ಎ) ಮತ್ತು 3(ಎ) ಗಳನ್ನು ಪುಸ್ತಿಕೆಯಲ್ಲಿ ಮುದ್ರಿಸುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ ಜಿಲ್ಲಾ ಪಂಚಾಯತ್ 2515 ರಡಿ ಅಥವಾ ಇತರೇ ಸೂಕ್ತ ಲೆಕ್ಕ ಶೀರ್ಷಿಕೆ (ವೇತನೇತರ) ಅಡಿ ವೆಚ್ಚ ಭರಿಸಲು ಕೆ.ಟಿ.ಪಿ.ಪಿ. ನಿಯಮಾನುಸಾರ ಅಲ್ಪಾವಧಿ ಟೆಂಡರ್ ಕರೆದು ಪುಸ್ತಕ ಮುದ್ರಿಸಲು ಆದೇಶ ನೀಡಲಾಗಿದೆ.

ಕರ್ನಾಟಕ ಸರ್ಕಾರ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ (ಪ್ರ) ಇವರಿಂದ ಅನುಮೋದಿಸಲ್ಪಟ್ಟಿದೆ)

(ಡಾ|| ಆರ್ ಗೋವಿಂದರಾಜು) 18/9
ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ
ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ ಸೂಕ್ತ ಕ್ರಮಕ್ಕಾಗಿ:**

1. ಮಹಾಲೇಖಪಾಲರು, ಲೆಕ್ಕಪತ್ರ / ಲೆಕ್ಕ ಪರಿಶೋಧನೆ, ಕರ್ನಾಟಕ ವೃತ್ತ, ಬೆಂಗಳೂರು.
2. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು / ಯೋಜನಾಧಿಕಾರಿಗಳು.
3. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಇಲಾಖೆಯ ಎಲ್ಲಾ ನಿರ್ದೇಶಕರುಗಳು.
3. ಸಹಾಯಕ ನಿರ್ದೇಶಕರು, ಗಣಕ ಕೋಶ, ಗ್ರಾಅಪ ಇಲಾಖೆ  ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.